# ಕ್ರಿಕೆಟ್ ವಿಶ್ವಕಪ್ ಟಿಕೆಟ್ ಮಾರಾಟ ಪ್ರಾರಂಭ

ಬೆಂಗಳೂರು, ಜೂ. 29: ಮುಂದಿನ ವರ್ಷ ಫೆಬ್ರವರಿ–ಮಾರ್ಚ್‌ನಲ್ಲಿ ನಡೆಯಲಿರುವ ಐಸಿಸಿ ಕ್ರಿಕೆಟ್ ವಿಶ್ವಕಪ್‌ನ ಆನ್‌ಲೈನ್ ಟಿಕೆಟ್‌ಗಳ ಮಾರಾಟ ಪ್ರಾರಂಭಗೊಂಡಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆತಿಥ್ಯ ವಹಿಸಲಿರುವ ಪಂದ್ಯಗಳ ಟಿಕೆಟ್‌ಗಳನ್ನು iccevents.yahoo.com ವೆಬ್‌ಸೈಟ್ ಮೂಲಕ ಖರೀದಿಸಬಹುದಾಗಿದೆ ಎಂದು ಕೆಎಸ್‌ಸಿಎ ಕಾರ್ಯದರ್ಶಿ ಬ್ರಿಜೇಶ್ ಪಟೇಲ್ ಮಾಹಿತಿ ನೀಡಿದ್ದಾರೆ.

ಬೆಂಗಳೂರಿನಲ್ಲಿ ನಡೆಯಲಿರುವ ಇಂಗ್ಲೆಂಡ್ – ಐರ್ಲೆಂಡ್ (ಮಾ 2, 2011), ಭಾರತ–ಐರ್ಲೆಂಡ್ (ಮಾ 6), ಆಸ್ಟ್ರೇಲಿಯಾ – ಕೀನ್ಯಾ (ಮಾ 13), ಆಸ್ಟ್ರೇಲಿಯಾ – ಕೆನಡಾ (ಮಾ 16) ಪಂದ್ಯಗಳಿಗೆ ಟಿಕೆಟ್ ಮಾರಾಟ ಈಗಾಗಲೇ ಆನ್‌ಲೈನ್‌ನಲ್ಲಿ ನಡೆಯುತ್ತಿದೆ. ಟೂರ್ನಿಗೆ ಮುನ್ನ ನಡೆಯುವ ಎರಡು ಅಭ್ಯಾಸ ಪಂದ್ಯಗಳಿಗೆ ಆನ್‌ಲೈನ್ ಟಿಕೆಟ್ ಮಾರಾಟ ಸದ್ಯದಲ್ಲೇ ಆರಂಭವಾಗಲಿದೆ ಎಂದು ಐಸಿಸಿಯ ಅಧಿಕೃತ ಟಿಕೆಟಿಂಗ್ ಜೊತೆಗಾರ ಕ್ಯಾಝೂಂಗ ಡಾಟ್ ಕಾಮ್‌ನ ಸಿಇಒ ನೀತು ಭಾಟಿಯ ಹೇಳಿದರು.

ಚಿನ್ನಸ್ವಾಮಿ ಕ್ರೀಡಾಂಗಣ ಭಾರತ – ಆಸ್ಟ್ರೇಲಿಯಾ (ಫೆ. 13) ಮತ್ತು ಆಸ್ಟ್ರೇಲಿಯಾ – ದಕ್ಷಿಣ ಆಫ್ರಿಕಾ (ಫೆ. 15) ನಡುವಿನ ಅಭ್ಯಾಸ ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ. ಭಾರತ ಆಡುವ ಪಂದ್ಯಗಳಿಗೆ ಕನಿಷ್ಠ 200 ರೂ.ನಿಂದ 12 ಸಾವಿರದವರೆಗೆ ವಿವಿಧ ಶ್ರೇಣಿಯ ಟಿಕೆಟ್‌ಗಳು ಮಾರಾಟಕ್ಕೆ ಲಭ್ಯವಿದೆ. ಇತರ ಪಂದ್ಯಗಳಿಗೆ ಕನಿಷ್ಠ ರೂ. 100ರಿಂದ ಟಿಕೆಟ್ ಶ್ರೇಣಿ ಆರಂಭವಾಗಲಿದೆ. 100 ಮತ್ತು 200ರೂ. ಮೌಲ್ಯದ ಟಿಕೆಟ್‌ಗಳು ಆನ್‌ಲೈನ್‌ನಲ್ಲಿ ಲಭ್ಯವಿರುವುದಿಲ್ಲ. ಇವುಗಳನ್ನು ಪಂದ್ಯಕ್ಕೆ ವಾರ ಮುನ್ನ ಕೌಂಟರ್ ಮೂಲಕ ಮಾರಾಟ ಮಾಡಲಾಗುವುದು ಎಂದು ಪಟೇಲ್ ಹೇಳಿದರು. ಆನ್‌ಲೈನ್ ಟಿಕೆಟ್‌ಗಳಿಗೆ ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಇಂಗ್ಲೆಂಡ್ ಮತ್ತು ಅಮೆರಿಕದಿಂದ ಬೇಡಿಕೆ ಕಂಡುಬಂದಿದೆ ಎಂದು ಮಾಜಿ ಕ್ರಿಕೆಟ್ ಆಟಗಾರ್ತಿಯೂ ಆಗಿರುವ ನೀತು ಹೇಳಿಕೊಂಡರು.